<u>ಸಾಕ್ಷಿಯನ್ನು ದಿನಾಂಕ **20.08.2022** ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು</u>.

<u>ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ವಕೀಲರಿಂದಃ</u>

3. ದಿನಾಂಕ 15.12.2016 ರಂದು ನನಗೆ ಆರೋಪಿತರು ಆದಾಯಕ್ಕಿಂತ ಹೆಚ್ಚಿನ ಆಸ್ತಿಗಳನ್ನು ಹೊಂದಿದ್ದಾರೆ ಎಂಬ ಮಾಹಿತಿ ಬಂದಿತ್ತು. ಅದನ್ನು ಸೋರ್ಸ್ ವರದಿಯಲ್ಲಿ ಉಲ್ಲೇಖಿಸಿಲ್ಲ. ಆ ರೀತಿ ಬಂದ ಮಾಹಿತಿಯನ್ನು ನಾನು ಠಾಣಾ ಡೈರಿಯಲ್ಲಿ ಉಲ್ಲೇಖಿಸಿದ್ದೇನೆ. ನಾನು ಸೋರ್ಸ್ ವರದಿಯೊಂದಿಗೆ ಠಾಣಾ ಡೈರಿಯಲ್ಲಿ ಉಲ್ಲೇಖಿಸಿದ ಪ್ರತಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಿಲ್ಲ. ನನಗೆ ಆರೋಪಿತರು ತಮ್ಮ ಆದಾಯಕ್ಕಿಂತ ಹೆಚ್ಚಿನ ಆದಾಯ ಹೊಂದಿದ್ದರು ಎಂಬ ಮಾಹಿತಿ ಬಂದಿರಲಿಲ್ಲ ಮತ್ತು ಅದರ ಉಲ್ಲೇಖವನ್ನು ಠಾಣೆಯಲ್ಲಿ ಮಾಡಿರಲಿಲ್ಲ ಅಂದರೆ ಸರಿಯಲ್ಲ.

4. ನನಗೆ ಮಾಹಿತಿ ಬಂದ ನಂತರ, ಸೋರ್ಸ್ ವರದಿಯನ್ನು ಸಲ್ಲಿಸುವ ಪೂರ್ವದಲ್ಲಿ ಮಾಹಿತಿಯ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಲು ಮಾಡಲಾದ ವಿಚಾರಣೆಗಾಗಿ ನಾನು ಪೊಲೀಸ್ ಅಧೀಕ್ಷಕರಿಂದ ಲಿಖಿತ ಅಧಿಕಾರವನ್ನು ಪಡೆದಿಲ್ಲ. ಆದರೆ ಮೌಖಿಕ ಅನುಮತಿ ಪಡೆದಿದ್ದೆನು. ನನಗೆ ಮೌಖಿಕ ಆದೇಶದ ಮೇರೆಗೆ ಆ ರೀತಿ ವಿಚಾರಣೆ ಮಾಡುವ ಅಧಿಕಾರ ಇರಲಿಲ್ಲ ಅಂದರೆ ಸರಿಯಲ್ಲ. ನನಗೆ ಪೊಲೀಸ್ ಅಧೀಕ್ಷಕರು ಮೌಖಿಕ ಅಧಿಕಾರ ನೀಡಿರಲಿಲ್ಲ ಅಂದರೆ ಸರಿಯಲ್ಲ.

5. ಇಬ್ಬರೂ ಆರೋಪಿತರ ತಂದೆ ತಾಯಿ ಮತ್ತು ಅವರ ಕುಟುಂಬದ

ಹಿನ್ನೆಲೆಯನ್ನು ನಾನು ತಿಳಿದುಕೊಂಡಿಲ್ಲ. ಆರೋಪಿತರಿಗೆ ಕೃಷಿ ಜಮೀನುಗಳು ಇದ್ದವು ಮತ್ತು ಅವುಗಳಿಂದ ಅವರು ಆದಾಯ ಪಡೆದಿದ್ದಾರೆ. ಸಾಕ್ಷಿ ಮುಂದುವರಿದು ಜಮೀನುಗಳ ಮತ್ತು ಅವುಗಳ ಆದಾಯದ ಕುರಿತು ವಿಚಾರಣೆ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ನಾನು ನಿಪಿ-1 ರಲ್ಲಿ ಆಸ್ತಿ ಐಟಂ ನಂ.1 ರಲ್ಲಿರುವ ಮನೆಗೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವ ಪೂರ್ವದಲ್ಲಿ ಭೇಟಿ ನೀಡಿದ್ದೇನೆ. ಭೇಟಿ ನೀಡಿದ ದಿನಾಂಕವನ್ನು ನಾನು ನಿಪಿ-1 ರಲ್ಲಿ ಕಾಣಿಸಿಲ್ಲ. ನಾನು ಆ ಮನೆಗೆ ಭೇಟಿ ನೀಡಿದಾಗ ನನ್ನೊಂದಿಗೆ ಕಟ್ಟಡದ ಮೌಲ್ಯವನ್ನು ತಿಳಿದುಕೊಳ್ಳಲು ನುರಿತ ವ್ಯಕ್ತಿಯನ್ನು ಕರೆದುಕೊಂಡು ಹೋಗಿಲ್ಲ. ನಾನು ಆ ಆಸ್ತಿಯ ಯಾವುದೇ ದಾಖಲೆಯನ್ನು ಪಡೆದಿಲ್ಲ. ಆದರೆ ನೋಂದಣಿ ಅಧಿಕಾರಿ ಕಛೇರಿಯಲ್ಲಿ ಪರಿಶೀಲನೆ ಮಾಡಿದ್ದೇನೆ. ಆ ರೀತಿ ಪರಿಶೀಲನೆ ಮಾಡಿದ್ದನ್ನು ನಿಪಿ-1 ರಲ್ಲಿ ಉಲ್ಲೇಖಿಸಿಲ್ಲ. ನಾನು ಮನೆಗೆ ಭೇಟಿ ನೀಡಿದ್ದನ್ನು ಮತ್ತು ಪರಿಶೀಲನೆ ಮಾಡಿದ್ದನ್ನು ಠಾಣಾ ಡೈರಿಯೇಲ್ಲಿ ಉಲ್ಲೇಖಿಸಿದ್ದೇನೆ. ಆ ಉಲ್ಲೇಖದ ಪ್ರತಿಯನ್ನು ನಿಪಿ-1 ರೊಂದಿಗೆ ಸಲ್ಲಿಸಿರುವುದಿಲ್ಲ.

6. ನಿಪಿ-1 ರಲ್ಲಿ ಕಾಣಿಸಿದ ಆಸ್ತಿ ಐಟಂ ನಂ.4 ರಿಂದ 6 ರಲ್ಲಿ ಕಾಣಿಸಿದ ವಾಹನಗಳ ದಾಖಲೆಗಳನ್ನು ಪರಿಶೀಲನೆ ಮಾಡಿಲ್ಲ. ಆದರೆ ಆ ವಾಹನಗಳು ಆರೋಪಿತರ ಮನೆಯ ಮುಂದೆ ನಿಂತಿದ್ದವು. ನನಗೆ ಬಾತ್ಮೀದಾರರು ನೀಡಿದ ಮಾಹಿತಿಯನ್ನಾಧರಿಸಿ ಆರೋಪಿತರ ಮನೆಯಲ್ಲಿ ಸುಮಾರು 105 ಗ್ರಾಂ ಚಿನ್ನಾಭರಣ ಇದೆ ಎಂದು ನಿಪಿ-1 ರಲ್ಲಿ ಕಾಣಿಸಿದ್ದೇನೆ. ಆ ಚಿನ್ನವನ್ನು ಅರ್ಜಿಸಿದ ವಿಧಾನವನ್ನು ಬಾತ್ಮೀದಾರರು ನನಗೆ ತಿಳಿಸಿಲ್ಲ.

ನಾನು ಆ ಆಭರಣಗಳ ಬೆಲೆಯನ್ನು ನಿಪಿ-1 ನ್ನು ತಯಾರಿಸಿದ ದಿನಾಂಕದಂದು ಇದ್ದ ಚಿನ್ನದ ಬೆಲೆಯನ್ನಾಧರಿಸಿ ಉಲ್ಲೇಖಿಸಿರುತ್ತೇನೆ. ನಾನು ಯಾವುದೇ ಪ್ರಾಥಮಿಕ ವಿಚಾರಣೆ ಮಾಡದೇ ಆರೋಪಿತರ ಆಸ್ತಿಗಳ ವಿವರ ಮತ್ತು ಮೌಲ್ಯ ಕಾಣಿಸಿದ್ದೇನೆ ಅಂದರೆ ಸರಿಯಲ್ಲ.

7. ಆರೋಪಿತರ ಮಕ್ಕಳ ವಿದ್ಯಾಭ್ಯಾಸಕ್ಕೆ ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ತಿಳಿಯಲು ನಾನು ದಾಖಲೆಗಳನ್ನು ನೋಡಿಲ್ಲ. ನಿಪಿ-1 ರಲ್ಲಿ ಕಾಣಿಸಿದ ಮೂರೂ ವಾಹನಗಳನ್ನು ಯಾವ ದಿನಾಂಕಗಳಂದು ಖರೀದಿಸಲಾಗಿತ್ತು ಮತ್ತು ಅವುಗಳ ಮೀಟರ್ ರೀಡಿಂಗ್ ಏನಿತ್ತು ಎಂಬುದನ್ನು ನಾನು ಪರಿಶೀಲನೆ ಮಡಿಲ್ಲ. ಆ ದಿನಾಂಕ ಮತ್ತು ಮೀಟರ್ ರೀಡಿಂಗ್ ಕಂಡುಕೊಳ್ಳದೆ ಅವುಗಳ ನಿರ್ವಹಣಾ ವೆಚ್ಚ ಮತ್ತು ಇಂಧನ ವೆಚ್ಚ ಕಂಡುಕೊಳ್ಳಲು ಬರುವುದಿಲ್ಲ ಅಂದರೆ ಸರಿಯಲ್ಲ. ನಾನು ಸರಿಯಾದ ಪ್ರಾಥಮಿಕ ತನಿಖೆ ಮಾಡದೇ ಆರೋಪಿತರ ಖರ್ಚನ್ನು ಹೆಚ್ಚು ತೋರಿಸಿದ್ದೇನೆ ಅಂದರೆ ಸರಿಯಲ್ಲ. ನಾನು ಸರಿಯಾದ ಪ್ರಾಥಮಿಕ ತನಿಖೆ ಮಾಡದೇ ಆರೋಪಿತರ ಆದಾಯವನ್ನು ಕಡಿಮೆ ತೋರಿಸಿದ್ದೇನೆ ಅಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧ ಸುಳ್ಳು ಸೋರ್ಸ್ ವರದಿಯನ್ನು ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

Spl.C.No.124/2020 PW-1
Date: 20.08.2022

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದ.ಕ., ಮಂಗಳೂರು.